ಇ) ಮೇಲಿನಂತೆ

ಈ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳು ಸಿ.ಒ.ಡಿ. ವಶದಲ್ಲಿರುವುದರಿಂದ, ದಾಖಲೆಗಳನ್ನು ಹಾಳು ಮಾಡುವುದು ಹಾಗೂ ಹಸ್ತಕ್ಷೇಪ ಮಾಡಿ ಸತ್ಯವನ್ನು ಮುಚ್ಚಿಡಲು ಅವಕಾಶವಿರುವುದಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

65 ಶ್ರೀ ರೋಷನ್ ಬೇಗ್ ಆರ್. :– ಮಾನ್ಯ ವೈದ್ಯಕೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸುಟ್ಟಗಾಯಗಳ ಚಿಕಿತ್ಸಾ ವಿಭಾಗದಲ್ಲಿ ಎಷ್ಟು ಕೊಠಡಿಗಳಿವೆ ಹಾಗೂ ಈಗಿನ ಅವಶ್ಯಕತೆಗೆ ಅನುಗುಣವಾಗಿ ಕೊಠಡಿಗಳು ಸಾಕಷ್ಟಿವೆಯೇ; ಇಲ್ಲದಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಆ) ಈ ಆಸ್ಪತ್ರೆಯಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಆಸ್ಪತ್ರೆಗೆ ಅವಶ್ಯಕವಾದ ಸಿಬ್ಬಂದಿಗಳಿದ್ದಾರೆಯೆ;

ಇ) ರೋಗಿಗಳಿಗೆ ಒದಗಿಸುವಷ್ಟು ಔಷಧಿಗಳ ದಾಸ್ತಾನು ಇದೆಯೆ; ಇಲ್ಲವಾದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು)?

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು:–

ಅ) 03,

ಇಲ್ಲ

ಇರುವ ಕೊಠಡಿಗಳಲ್ಲೇ ನಿಬಾಯಿಸಲಾಗುತ್ತಿದೆ

ಆ) 778

ಇಲ್ಲ

ಇ) ಇದೆ

66 ಶ್ರೀ ರೋಷನ್ ಬೇಗ್ ಆರ್. (ಶಿವಾಜಿ ನಗರ):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕಟ್ಟಡ ನಿರ್ಮಾಣ ಕಾಯ್ದೆ (Karnataka Construction Workers Act) ಅಡಿಯಲ್ಲಿ ಅರ್ಹತೆಯನ್ನು ಹೊಂದಿರುವ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಇದರಲ್ಲಿರುವ ವರ್ಗಗಳನ್ನು (Categories) ಹೆಚ್ಚಿಸುವ ವಿಷಯ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಕೈಗೊಳ್ಳುತ್ತಿರುವ ಕ್ರಮದ ವಿವರಗಳನ್ನು ಒದಗಿಸಲಾಗುವುದೆ?